ಜಗಳದ ಮೂಲಕವೇ ತಮ್ಮ ತಮ್ಮ ಅಹಂ ಅನ್ನು ತಣಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಎಷ್ಟೋ ಮಂದಿ ಅಪ್ಪ–ಅಮ್ಮಂದಿರ ಜಗಳದಲ್ಲಿ ಮಕ್ಕಳು ಬಡವಾಗುತ್ತಿರುವುದನ್ನು ನ್ಯಾಯಾಧೀಶರ ಮಾತು ಸೂಚಿಸುವಂತಿತ್ತು.

### ಪತಿ-ಪತ್ನಿ ಜಗಳದಲ್ಲಿ ಬಡವಾಗುವ ಕೂಸು

ಗಂಡ ಹೆಂಡತಿ ಮಧ್ಯೆ ಜಗಳಗಳಾದಾಗ, ‘ನನ್ನ ಬದುಕನ್ನು ನಾನು ನೋಡಿಕೊಳ್ಳಬಲ್ಲೆ, ಮಗುವನ್ನೂ ನಾನು ಸಾಕಬಲ್ಲೆ’ ಎಂಬ ಆರ್ಥಿಕ ವಿಚಾರವಷ್ಟೇ ಕೊನೆಯದಾಗಿ ಮುನ್ನೆಲೆಗೆ ಬಂದುಬಿಡುತ್ತದೆ. ಜಗಳವು ರಾಜಿಯಾಗುವ ಹಂತವನ್ನು ತಲುಪುವುದಿಲ್ಲ ಎಂಬುದು ಸ್ಪಷ್ಟವಾಗುತ್ತಲೇ ಗಂಡ ಹೆಂಡತಿ ಪರಸ್ಪರ ತಮ್ಮ ತಮ್ಮ ಆಸ್ತಿಯ ಲೆಕ್ಕಾಚಾರವನ್ನೋ, ಅಥವಾ ತಮ್ಮ ಪಾಲಿನ ಲೆಕ್ಕಾಚಾರವನ್ನೋ ಮಾಡುತ್ತಾ ಜಗಳವನ್ನು ಬೆಳೆಸುತ್ತಾರೆ. ಬದುಕಿಗೆ ಹಣಕಾಸು ಬಹಳ ಮುಖ್ಯ ಎನ್ನುವುದು ನಿಜ. ಆದರೆ, ಬದುಕಿನ ಲೆಕ್ಕಾಚಾರವನ್ನು ಮಗುವಿನ ದೃಷ್ಟಿಕೋನದಿಂದ ನೋಡುವ ಒಂದು ಆಯಾಮವನ್ನೇ ಅಪ್ಪ





# ಚಂದದ ಚಿತ್ರಪಟಗಳು

ಮುಂಜಾನೆ ವಾಕಿಂಗ್ ಹೋಗುವಾಗ ದೊಡ್ಡ ಸೈಕಲ್‌ನಲ್ಲಿ ಅಪ್ಪ, ಚಿಕ್ಕ ಸೈಕಲ್‌ನಲ್ಲಿ ಮಗ ಸಾಗುವ ದೃಶ್ಯ ಕಣ್ಣ ಮುಂದೆ ಬರುತ್ತದೆ. ಅಮ್ಮ ಮಗನಿಗೆ ಹೇಳುತ್ತಾಳೆ: ‘ಮಗಾ, ಅಪ್ಪನ್ನ ಸ್ವಲ್ಪ ಜೋಪಾನ ಕರ್ಕೊಂಡು ಹೋಗು.’ ಪುಟ್ಟ ಹುಡುಗ ಬಹಳ ಜವಾಬ್ದಾರಿಯಿಂದ – ‘ಆಯ್ತು ಮಮ್ಮಿ’ ಅಂದ. ಗಂಡ ಹೆಂಡತಿ ಇಬ್ಬರೂ ನಕ್ಕರು.

ಮೊನ್ನೆ ಪಾರ್ಟಿಯಲ್ಲಿ ಅವನು ಮಗಳನ್ನು ಕರೆದುಕೊಂಡು ಬಂದಿದ್ದ. ‘ಇವಳು ನನ್ನ ಮಗಳು ಸುಹಾನಿ. ಅಮ್ಮ ಸಾಫ್ಟ್‌ವೇರ್ ಕಂಪನಿಯಲ್ಲಿರುವುದು. ರಾತ್ರಿ ಶಿಫ್ಟ್ ಇದೆ. ಹಾಗಾಗಿ ಇವಳು ಅಪ್ಪನ ಬೇಬಿ’ ಎಂದ.

ಈ ಪರಿಚಯದಲ್ಲಿ ವಿಶೇಷವೇನೂ ಇಲ್ಲ. ಮಾತಿನ ಮಧ್ಯೆ ಒಂದು ಸಾಲು ಬಂತು. ‘She loves her mom and moms work too ಅಲ್ವಾ... ಚಿನ್ನೀ’ ಎನ್ನುತ್ತಿದ್ದ. ಬಹಳ ಮಾತಿನ ಮಧ್ಯೆ ಹಾದು ಹೋಗುವ ನವಿರು ಸಾಲುಗಳೇ ಬದುಕಿನ ಧೋರಣೆಗಳ ದ್ಯೋತಕ.

ಆಫೀಸಿನಿಂದ ಬಂದು ಸೋಫಾದ ಮೇಲೆ ದೊಪ್ಪನೆ ಕುಸಿಯುವ ಅಮ್ಮ. ಅಪ್ಪ ಒಂದೆರಡು ಮಾತನಾಡುತ್ತಾನೆ. ‘ಅಮ್ಮಂಗೆ ನೀರು ತಂದುಕೊಡು ಮಗಾ...’ ಎಂದು ಮಗನ ರಮಿಸುತ್ತಾನೆ. ‘ಅಪ್ಪ ಎಷ್ಟು ನೀಟ್ ಇರ್ತಾರೆ ನೋಡು. ನೀನು ನೀಟಾಗಿರೋದು ಕಲಿ’ ಎನ್ನುವ ಹಗುರ ಸಾಲುಗಳು ಮಕ್ಕಳಲ್ಲಿ ಸಹಿಷ್ಣುತೆಯನ್ನೂ ಸಮಾಜದಲ್ಲಿ ಒಳ್ಳೆಯದನ್ನು ಗುರುತಿಸುವ ಸಾಮರ್ಥ್ಯವನ್ನೂ ಮೂಡಿಸಬಲ್ಲವು ಎನ್ನುತ್ತಾರೆ ಸಮಾಲೋಚಕರು.

ಈ ಸುಂದರ ಚಿತ್ರಗಳ ನಡುವೆಯೇ ಕದಡಿದ ಬಿಂಬಗಳನ್ನು ನೋಡಿದರೆ, ಅಲ್ಲಿಯೂ ಕೆಲವು ಗಮನಸೆಳೆಯುವ ಉದಾಹರಣೆಗಳಿವೆ. ವಿಚ್ಛೇದಿತ ಅಪ್ಪ ಅಮ್ಮಂದಿರಲ್ಲೂ ಮಕ್ಕಳ ಅಗತ್ಯಗಳು ಹಾಗೂ ಅವರ ಮಾನಸಿಕ ಸ್ಥಿತಿಗತಿಯ ಬಗ್ಗೆ ಯೋಚಿಸುವವರು ಇರುತ್ತಾರೆ. ಪದ್ಮಶ್ರೀ ಅವರನ್ನು ನೋಡಿ, ಅವರು ತಮ್ಮ ಮಗನನ್ನು ನಿಯಮಿತವಾಗಿ ವಿಚ್ಛೇದಿತ ಪತಿಯ ಬಳಿಗೆ ಕರೆದುಕೊಂಡು ಹೋಗುತ್ತಾರೆ. ಆತ ತನಗೆ ಮಾಡಿದ ಅನ್ಯಾಯವೇನೇ ಇರಲಿ, ಮಗನಿಗೆ ಸುರಕ್ಷೆಯ ಭಾವನೆ ಮೂಡಲಿ ಎಂಬ ಆಶಯವೇ ಆಕೆಗೆ ತಾಳ್ಮೆಯನ್ನು ಕಲಿಸಿದೆ. ಸಂಜೆ ಒಂದಷ್ಟು ಹೊತ್ತು ಪಾರ್ಕಿನಲ್ಲಿ ಆಟವಾಡಿ ಬರುವ ಮಗನ ಬಳಿ ಪದ್ಮಶ್ರೀ ಹೆಚ್ಚೇನೂ ಪ್ರಶ್ನೆ ಕೇಳುವುದಿಲ್ಲ. ‘ನಾನು ಓದುವುದಕ್ಕಿದೆ. ನೀನೂ ಓದಿಕೋ’ ಎಂದು ಸ್ವಲ್ಪ ಬ್ಯುಸಿ ನಟನೆ ಮಾಡುತ್ತಾರೆ. ಆ ಮೂಲಕ ಮನಸ್ಸಿನ ಕಹಿಯು ಮಗನ ಮುಂದೆ ಕಾಣಿಸಿಕೊಳ್ಳದೇ ಇರಲಿ ಎಂದು ಆಶಿಸುತ್ತಾರೆ.

ಹಾಗಂತ ಎಲ್ಲ ಸಂದರ್ಭಗಳಲ್ಲಿಯೂ ಪರಿಸ್ಥಿತಿ ತಿಳಿಯಾಗಿರುವುದಿಲ್ಲ. ಕುಡುಕಿ ಹೆಂಡತಿಗೆ ವಿಚ್ಛೇದನ ನೀಡಿದ ಸುಭಾಷ್ ಮಗಳನ್ನು ಅವಳ ಬಳಿಗೆ ಕಳುಹಿಸುವಾಗ ಸಿಕ್ಕಾಪಟ್ಟೆ ಚಿಂತಿತರಾಗುತ್ತಾರೆ. ಆಕೆಯ ಹೊಸ ಗಂಡನೇನಾದರೂ ತನ್ನ ಮಗಳ ಬಗ್ಗೆ ಕೆಟ್ಟದಾಗಿ ಮಾತನಾಡುತ್ತಾನೇನೋ ಎಂದು ಮತ್ತೆ ಮತ್ತೆ ಆತಂಕಪಡುತ್ತಾರೆ. ಆದರೆ ಮಗಳಿಗೆ ಅಮ್ಮ ಬೇಕಲ್ಲವೇ... ‘ನ್ಯಾಯಾಲಯದಲ್ಲಿ ಮಾಡಿಕೊಂಡ ಒಪ್ಪಂದದ ಪ್ರಕಾರ ಪ್ರತಿ ಬೇಸಿಗೆ ರಜೆ ಮತ್ತು ಕ್ರಿಸ್‌ಮಸ್ ರಜೆಯಲ್ಲಿ ಮಗಳನ್ನು ಅಮ್ಮನ ಬಳಿಗೆ ಕಳುಹಿಸುತ್ತೇನೆ. ಆಗೀಗ ಅವಳೇ ಬಂದು ಮಗಳನ್ನು ಶಾಪಿಂಗ್ ಕರೆದುಕೊಂಡು ಹೋಗುತ್ತಾಳೆ’ ಎಂದು ಸುಭಾಷ್ ಮ್ಲಾನವದನನಾಗಿ ಹೇಳುತ್ತಾರೆ.